**ಇಂದು ದಿಃ 05.04.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್.ಜೆ.ಡಿ ವಕೀಲರಿಂದಃ**

ಬೆಟ್ಟದಪುರ ಕುಶಾಲನಗರ ಮುಖ್ಯ ರಸ್ತೆಯಲ್ಲಿ ರಾತ್ರಿ 8.00 ಗಂಟೆಯಲ್ಲಿ ಅಪಘಾತವಾಗಿದೆ ಎಂದರೆ ಸರಿ. ಆ ದಿನ ನಾನು ಓಡಿಸುತ್ತಿದ್ದ ಬೈಕ್ ನನ್ನದೆ. ನನ್ನ ಬೈಕ್ ಗೆ ವಿಮೆ ಇದ್ದು ಅದನ್ನು ನ್ಯಾಯಾಲಕ್ಕೆ ಕೊಟ್ಟಿಲ್ಲ. ನನಗೆ ಚಾಲನಾ ಪರವಾನಗಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಪಘಾತಪಡಿಸಿದ ವಾಹನ ಎದುರುಗಡೆಯಿಂದ ಬಂದು ಅಪಘಾತಪಡಿಸಿತು. ಸ್ಥಳ ನಕ್ಷೆಯಲ್ಲಿ ತೋರಿಸಿರುವಂತೆ ಅಪಘಾತವಾದ ಸ್ಥಳ ನೇರವಾಗಿ ಇರುವುದಿಲ್ಲ ವಾಸ್ತವಿಕವಾಗಿ ರಸ್ತೆ ತಿರುವು ಇದೆ. ಸ್ಥಳ ನಕ್ಷೆಯಲ್ಲಿ ತೋರಿಸಿರುವಂತೆ ಅಷ್ಟೊಂದು ನೇರವಾಗಿ ಇರುವುದಿಲ್ಲ ಆದ್ದರಿಂದ ನಕ್ಷೆ ಸುಳ್ಳು. ಅಪಘಾತವಾದ ಸ್ಥಳವನ್ನು ಪೊಲೀಸರಿಗೆ ನಾನು ತೋರಿಸಿಲ್ಲ ನನ್ನ ತಂಗಿ ತೋರಿಸಿದ್ದಾರೆ. ಪೊಲೀಸರು ತಯಾರಿಸಿದ ನಕ್ಷೆ ಸರಿಯಿಲ್ಲ ಎಂದು ನಾನು ದೂರು ಕೊಟ್ಟಿಲ್ಲ. ಅಪಘಾತದ ಬಗ್ಗೆ ಪೊಲೀಸರಿಗೆ ನನ್ನ ತಂಗಿ ದೂರು ಕೊಟ್ಟಿದ್ದಾರೆ. ನನ್ನ ತಂಗಿ ಅಪಘಾತವನ್ನು ನೋಡಿಲ್ಲ. ಅಪಘಾತವಾದ ದಿನ ನಾನು ಹೆಲ್ಮೆಟ್ ಹಾಕಿದ್ದರೆ ನನ್ನ ತಲೆಗೆ ಏಟು ಬೀಳುತ್ತಿರಲಿಲ್ಲ ಎಂದರೆ ಸರಿಯಲ್ಲ ನಾನು ಹೆಲ್ಮೆಟ್ ಹಾಕಿದ್ದೆ. ಎಫ್ ಐ ಆರ್ ನಲ್ಲಿರುವ ಮಾಹಿತಿ ನನಗೆ ಗೊತ್ತಿದೆ. ನಿ.ಪಿ-7 ರಲ್ಲಿರುವ ವಿಷಯಗಳನ್ನು ಓದಿ ತಿಳಿದಿದ್ದೇನೆ. ನನಗೆ ಚಾರ್ಜ್ ಶೀಟ್ ಪ್ರಕಾರ ನನಗೆ ಅಪಘಾತಪಡಿಸಿದ ವಾಹನದ ಚಾಲಕನಿಗೆ ಚಾಲನಾ ಪರವಾನಗಿ ಇರಲಿಲ್ಲವೆಂದು ನಮೂದಿಸಲಾಗಿದೆ ಎಂದರೆ ಸರಿ. ಅಪಘಾತವಾದ ಕೂಡಲೇ ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆ, ಮೈಸೂರಿನ ಕೆ.ಆರ್.ಆಸ್ಪತ್ರೆ ನಂತರ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಸುಮಾರು ಒಂದೂವರೆ ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ಡಾ.ವಾಸನ್ ರವರು ನನಗೆ ಚಿಕಿತ್ಸೆ ನೀಡಿದ್ದಾರೆ. ನಾನು ಹಾಜರುಪಡಿಸಿರುವ ಮೆಡಿಕಲ್ ಬಿಲ್ಲುಗಳನ್ನು ಪರಿಹಾರಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ದಿನಾಂಕ ನೆನಪಿಲ್ಲ. ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳುವ ಸಲುವಾಗಿ 2 ನೇ

ಬಾರಿ ಆಸ್ಪತ್ರೆಗೆ ದಾಖಲಾಗಿದ್ದೆ. ನನ್ನ ಹಣೆ ಮತ್ತು ಮುಖಕ್ಕೆ ಮಾತ್ರ ಪೆಟ್ಟಾಗಿತ್ತು, ತಲೆಗೆ ಪೆಟ್ಟಾಗಿರಲಿಲ್ಲ ಎಂದರೆ ಸರಿಯಲ್ಲ. ಗಾಯಗಳು ವಾಸಿಯಾಗಿವೆ ಎಂದರೆ ಸರಿ ಈಗಲೂ ಕೂಡ ಚಿಕಿತ್ಸೆ ಪಡೆಯುತ್ತಿದ್ದೇನೆ. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರ ಸುಮಾರು 36-37 ಬಾರಿ ಆಸ್ಪತ್ರೆಗೆ ಹೋಗಿದ್ದೇನೆ. ಪ್ರತಿ ಬಾರಿ ಹೋದಾಗ ಆಸ್ಪತ್ರೆಯಲ್ಲಿ ಒಪಿಡಿ ಸ್ಲಿಪ್ ಕೊಡುತ್ತಾರೆ ಎಂದರೆ ಸರಿ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಆಸ್ಪತ್ರೆಗೆ 37 ಬಾರಿ ಹೋಗಿಲ್ಲ ಆದ್ದರಿಂದ ಒಪಿಡಿ ಸ್ಲಿಪ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕೊನೆಯ ಬಾರಿಗೆ 2025 ರ ಫೆಬ್ರವರಿ ತಿಂಗಳಲ್ಲಿ ಆಸ್ಪತ್ರೆಗೆ ಹೋಗಿದ್ದೇನೆ. ನನಗೆ ಯಾವುದೇ ತೀವ್ರ ಸ್ವರೂಪದ ಗಾಯಗಳಾಗಿರಲಿಲ್ಲ, ಮುಂದುವರಿದ ಚಿಕಿತ್ಸೆ ಪಡೆದಿಲ್ಲ ಆದ್ದರಿಂದ ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ-10 ರ ಪ್ರಕಾರ ನನಗೆ ನಾಜರ್ ಪ್ರಾಬ್ಲಮ್ ಹೊರತುಪಡಿಸಿ ಬ್ರೇನ್ ಪ್ರಾಬ್ಲಮ್ ಇರುವುದಿಲ್ಲ ಎಂದರೆ ಸುಳ್ಳು. ಅಪಘಾತವಾಗುವ ಕಾಲಕ್ಕೆ ನಾನು Vivo service center ನಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ದಿನಾಂಕ 30.03.2022 ರಂದು ನನಗೆ ಅಪಘಾತವಾಗಿದೆ ಎಂದರೆ ಸರಿ. ನಿ.ಪಿ-1 ದಿನಾಂಕ 01.11.2021 ಎಂದರೆ ಸರಿ. ನಾನು ಈಗಲೂ ಸಹ ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ನನಗೆ ಅಪಘಾತದ ಪರಿಣಾಮ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತಪಡಿಸಿದ ವಾಹನ ಚಾಲಕನಿಗೆ ಚಾಲನಾ ಪರವಾನಗಿ ಇಲ್ಲದಿರುವ ಕಾರಣಕ್ಕೆ 2 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಗೊತ್ತಿಲ್ಲ.

**<u>ಪಾಟೀ ಸವಾಲುಃ *1* ನೇ ಎದುರುದಾರರ ಪರ ಶ್ರೀ.ಸಿ.ಕೆ.ಎಂ ವಕೀಲರಿಂದಃ</u>**

ನನ್ನ ಹುಟ್ಟೂರು ಕುಶಾಲನಗರ. ದಿನಾಂಕ 01.04.2022 ರಲ್ಲಿ ನಾನು ಬೈಲಕುಪ್ಪೆಯಲ್ಲಿ ವಾಸವಿದ್ದೆ. ನನ್ನ ಬೈಕ್ ನಂಬರ್ ಕೆಎ-12-7736. 2020 ರ ಡಿಸೆಂಬರ್ ತಿಂಗಳಲ್ಲಿ ನಾನು ಬೈಕ್ ಖರೀದಿಸಿದ್ದೆ. ದಿನಾಂಕ 01.04.2022 ಕ್ಕೆ ನನ್ನ ವಾಹನಕ್ಕೆ ವಿಮೆ ಚಾಲ್ತಿಯಲ್ಲಿತ್ತು. ವಿಮಾ ಪಾಲಿಸಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಿನಾಂಕ 01.04.2022 ಕ್ಕೆ ನನಗೆ ಸೂಕ್ತ ಚಾಲನಾ ಪರವಾನಗಿ ಇತ್ತು

ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನಗೆ ಅಪಘಾತಪಡಿಸಿದೆ ಎಂದು ಹೇಳಲಾದ ವಾಹನ ನೊಂದಣಿ ಸಂಖ್ಯೆ ಕೆಎ-45- ಇಸಿ-4347 ಬೆಟ್ಟದಪುರದಿಂದ ಕುಶಾಲನಗರದ ಕಡೆಗೆ ಬರುತ್ತಿತ್ತು. ರಾಗಿ ಆಲದ ಮರದ ಗ್ರಾಮದಲ್ಲಿ ನನಗೆ ಅಪಘಾತವಾಯಿತು. ಅಲ್ಲಿಂದ ಬಸ್ಸ ನಿಲ್ದಾಣಕ್ಕೆ ಎಷ್ಟು ದೂರವಿದೆ ಎಂದು ಗೊತ್ತಿಲ್ಲ. ಆ ಸಮಯದಲ್ಲಿ ರಾತ್ರಿಯಾಗಿದ್ದ ಕಾರಣ ಬೇರೆ ಜನರು ಇದ್ದ ಬಗ್ಗೆ ನನಗೆ ಕಾಣಿಸಲಿಲ್ಲ. ರಾತ್ರಿಯಾಗಿದ್ದ ಕಾರಣ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ನನಗೆ ಅಪಘಾತವಾದ ಕೂಡಲೇ ನಾನು ಕೆಳಗೆ ಬಿದ್ದಿದ್ದೇನೆ. ಬಿದ್ದ ಕೂಡಲೇ ನನಗೆ ಜ್ಞಾನ ಇರಲಿಲ್ಲ. ನನ್ನ ಎದುರಿಗೆ ಬರುತ್ತಿದ್ದ ವಾಹನಕ್ಕೆ ಹೆಡ್ ಲೈಟ್ ಇರಲಿಲ್ಲ ಮತ್ತು ಅದು ನನಗೆ ಕಾಣಿಸುತ್ತಿರಲಿಲ್ಲ. ಆ ವಾಹನ ನನಗೆ ಕಾಣಿಸದಿದ್ದ ಕಾರಣ ಅದರ ನೊಂದಣಿ ಸಂಖ್ಯೆ ನನಗೆ ಕಾಣಿಸಲಿಲ್ಲ ಎಂದರೆ ಸರಿ. ನನ್ನನ್ನು ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಗೆ ಸಾಗಿಸಲಾಗಿತ್ತು ಎಂದು ನನ್ನ ತಂಗಿ ಹೇಳಿದ್ದಾರೆ. ಅಪಘಾತವಾಯಿತು ಎಂದು ಹೇಳಲಾದ ಸ್ಥಳದಿಂದ ನನ್ನ ತಂಗಿ ಮತ್ತು ಕುಟುಂಬದ ಸ್ನೇಹಿತರು ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಗೆ ನನ್ನನ್ನು ಸಾಗಿಸಿದ್ದಾರೆ. ಸ್ಥಳದಲ್ಲಿ ಜ್ಞಾನ ತಪ್ಪಿ ಎಷ್ಟು ಸಮಯದವರೆಗೆ ಬಿದ್ದಿದ್ದೆ ಎಂದು ನನಗೆ ಮಾಹಿತಿ ಸಿಕ್ಕಿಲ್ಲ. ಅಪಘಾತವಾದ 4 ತಿಂಗಳ ನಂತರ ನನಗೆ ಪ್ರಜ್ಞೆ ಬಂದಿತ್ತು. ಅಪಘಾತವಾದ ದಿನವೇ ನನ್ನ ತಂಗಿ ರುಕ್ಮಿಣಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ. ನನ್ನ ಸಹೋದರಿಗೆ ಇಂತದ್ದೆ ವಾಹನದಿಂದ ಅಪಘಾತವಾಯಿತು ಎಂದು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂಗಿ ನ್ಯಾಯಾಲಯಕ್ಕೆ ಬಂದು ಹೇಳುವವರೆಗೂ ಇಂತಹದ್ದೆ ವಾಹನ ಅಪಘಾತಪಡಿಸಿದೆ ಎಂದು ನನಗೆ ಹೇಳಲು ಸಾಧ್ಯವಾಗುವುದಿಲ್ಲ ಎಂದರೆ ಸರಿ. ಅಪಘಾತವಾದ ವಾಹನ ಸ್ಥಳದಲ್ಲಿತ್ತು ಆ ಬಗ್ಗೆ ನನ್ನ ಸಹೋದರಿ ಮಾಹಿತಿ ಕೊಟ್ಟಿದ್ದಾಳೆ. ನನ್ನ ತಂಗಿ ಕೊಟ್ಟ ಮಾಹಿತಿ ಮೇರೆಗೆ ಇಂತಹದ್ದೆ ವಾಹನದಿಂದ ಅಪಘಾತವಾಯಿತು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ನನಗೆ ಅಪಘಾತಪಡಿಸಿದ ವಾಹನ ಎಷ್ಟು ವೇಗದಲ್ಲಿ ಬರುತ್ತಿತ್ತು ಎಂದು ಗೊತ್ತಿಲ್ಲ. ಪೊಲೀಸರು ಕೊಟ್ಟ ಮಾಹಿತಿಯ ಮೇರೆಗೆ 1ನೇ ಎದುರುದಾರರು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ. ಪೊಲೀಸರು ನನ್ನನ್ನು ಕರೆದು ವಿಚಾರಣೆ ಮಾಡಿರುವುದಿಲ್ಲ. ಪೊಲೀಸರು ನನ್ನ ತಂಗಿ ಮತ್ತು ನನ್ನ ಮಾವನ ಮಗನನ್ನು ಕರೆದು ವಿಚಾರ ಮಾಡಿದ್ದಾರೆ. 1ನೇ

ಎದುರುದಾರರು ತನ್ನ ವಾಹನವನ್ನು ನಾನು ಹೇಳಿದಂತ ದಿನಾಂಕ ಮತ್ತು ಸ್ಥಳದಲ್ಲಿ ವಾಹನವನ್ನು ಚಾಲನೆ ಮಾಡಿಲ್ಲ, ನನ್ನ ತಂಗಿ ಮತ್ತು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಕಳೆದ ತಿಂಗಳು 1 ನೇ ಎದುರುದಾರರನ್ನು ನ್ಯಾಯಾಲಯದಲ್ಲಿ ನೋಡಿದ್ದೇನೆ. ಅದಕ್ಕಿಂತ ಮುಂಚೆ ಅವರನ್ನು ನೋಡಿಲ್ಲ. ನಾನು ವಿಪ್ರೊ ಕಂಪನಿಗೆ ಸೇರಿದ ದಿನಾಂಕ ಹೇಳಲು ಗೊತ್ತಿಲ್ಲ. ನನ್ನನ್ನು ರೆಡ್ಡಿ ಎಂಬುವರು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ನಾನು ಕೆಲಸಕ್ಕೆ ಹಾಜರಾದ ಬಗ್ಗೆ ಹಾಜರಾತಿ ಪುಸ್ತಕ ಇರುತ್ತಿರಲಿಲ್ಲ ವಿ–ಚಾರ್ಟ್ ಮೂಲಕ ಮೆಸೇಜ್ ಮಾಡುತ್ತಿದ್ದೆ. ಆ ಬಗ್ಗೆ ಪ್ರಿಂಟೌಟ್ ತೆಗೆದುಕೊಂಡರೆ ಸಿಗುವುದಿಲ್ಲ. ಅದನ್ನು ಕಂಪನಿಯವರು ಕೊಡಬೇಕು. ವಿ–ಚಾರ್ಟ್ ಪ್ರಿಂಟ್ ಕೊಡುವಂತೆ ಕಂಪನಿಯವರನ್ನು ನಾನು ಕೇಳಿಲ್ಲ. ನಾನು ಕೆಲಸ ಮಾಡುತ್ತಿದ್ದೆ ಎಂದು ದಾಖಲೆ ಕೊಡಲು ಅಲ್ಲಿ ಹೆಚ್ ಆರ್ ಆಗಿದ್ದ ಗೀತಾ ರವರು YO telegram private limited ಸೂಕ್ತ ಪ್ರಾಧಿಕಾರ ಆಗಿದೆ. ನಿ.ಪಿ–9 ನ್ನು human resource manager ಆಗಿದ್ದ ಗೀತಾ ರವರು ಕೊಟ್ಟಿದ್ದಾರೆ. ನಿ.ಪಿ–9 ನ್ನು ನಾನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವುದಿಲ್ಲ. ನಾನು ಸರ್ವಿಸ್ ಇಂಜಿನಿಯರ್ ಕೆಲಸ ಹೊರತುಪಡಿಸಿ ಹಸು ಸಾಕಾಣಿಕೆ ಮತ್ತು ವ್ಯವಸಾಯ ಮಾಡುತ್ತಿದ್ದೆ. ನನ್ನ ಹೆಸರಿನಲ್ಲಿ ಜಮೀನು ಇರುವುದಿಲ್ಲ. ನನ್ನ ಹೆಸರಿನಲ್ಲಿ ಹಸುಗಳನ್ನು ಖರೀದಿ ಮಾಡಿದ್ದೇನೆ. ಚಿಕ್ಕ ಚಿಕ್ಕ ಮೂರು ಕರುಗಳನ್ನು ತೆಗೆದುಕೊಂಡಿದ್ದೆ ಅದನ್ನು ಸಾಕಿದ್ದೇನೆ. ನನಗೆ ಹಸು ಸಾಕುವುದು ಗೊತ್ತಿಲ್ಲ ಮತ್ತು ವ್ಯವಸಾಯ ಮಾಡುವುದು ಗೊತ್ತಿಲ್ಲ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಜ್ಞಾನ ಬರುವವರೆಗೆ ಎಲ್ಲಾ ಚಿಕಿತ್ಸೆಗಳನ್ನು ನೀಡಿದ್ದರಾ ಎಂದರೆ ಆ ನಂತರವೂ ಚಿಕಿತ್ಸೆ ಪಡೆದುಕೊಂಡಿದ್ದೇನೆ. ನನಗೆ ಪ್ರಜ್ಞೆ ಬಂದ ಕಾಲಕ್ಕೆ ಗಾಯಗಳು ಪೂರ್ತಿ ವಾಸಿಯಾಗಿರಲಿಲ್ಲ. ಪ್ರಜ್ಞೆ ಬಂದ 9 ತಿಂಗಳ ನಂತರ ನನಗೆ ಗಾಯಗಳು ವಾಸಿಯಾಗಿವೆ. ಡಾ.ವಾಸನ್ ನನಗೆ ಪ್ಲಾಸ್ಟಿಕ್ ಸರ್ಜರಿ ಮಾಡಿದ್ದಾರೆ. ಅವರೇ ನನಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದ್ದರು. ಪ್ಲಾಸ್ಟಿಕ್ ಸರ್ಜರಿಗಾಗಿ ಒಂದೂವರೆ ಲಕ್ಷ ಖರ್ಚಾಗುತ್ತದೆ ಎಂದು ವೈದ್ಯರು ನನ್ನ ತಂಗಿಗೆ ಹೇಳಿದ್ದಾರೆ. ಪ್ಲಾಸ್ಟಿಕ್ ಸರ್ಜರಿ ಮಾಡಿದ ದಿನಾಂಕ ನೆನಪಿಲ್ಲ. ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳುವ ಸಮಯದಲ್ಲಿ 15 ದಿವಸ ಆಸ್ಪತ್ರೆಯಲ್ಲಿ ಇದ್ದೆ. 15 ದಿವಸಕ್ಕೆ ಎಷ್ಟು ಖರ್ಚಾಗಿದೆ ಎಂದು

ಹೇಳಲು ಗೊತ್ತಿಲ್ಲ. ನಾನು ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಿಲ್ಲ ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಯಾವುದೇ ಅಪಘಾತ ಮಾಡಿಲ್ಲ, ಹೇಗಾದರೂ ಮಾಡಿ ಪರಿಹಾರ ಪಡೆದುಕೊಳ್ಳಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರೊಡನೆ ಶಾಮೀಲಾಗಿ 1 ನೇ ಎದುರುದಾರರ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**